ಅ) ಹಾಗಿದ್ದಲ್ಲಿ ಅದನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ಸಕಲೇಶಪುರ ಕೆ.ಇ.ಬಿ. ಉಪ ವಿಭಾಗದಲ್ಲಿ ಸಿಬ್ಬಂದಿಯ ಕೊರತೆಯಿರುವುದು ನಿಜ. ಆದಾಗ್ಯೂ ಲಭ್ಯವಿರುವ ಸಿಬ್ಬಂದಿಯ ಸೇವೆಯನ್ನು ಬಳಸಿಕೊಂಡು ಕೆಲಸಗಳನ್ನು ನಿರ್ವಹಿಸಲಾಗುತ್ತಿದ್ದು ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ಅದಷ್ಟು ಜಾಗ್ರತೆ ಭರ್ತಿ ಮಾಡಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸೇತುವೆ ಈಶ್ವರಹಳ್ಳಿ ಬಳಿ ಇರುವ ದುರಸ್ತಿ

117 - ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ-ಹಾಸನ ರಸ್ತೆಯಲ್ಲಿ ಈಶ್ವರಹಳ್ಳಿ ಬಳಿಯಿರುವ ಸೇತುವೆಯು ಸುಮಾರು 75 ವರ್ಷಗಳಷ್ಟು ಹಿಂದಿನದಾಗಿದ್ದು, ಶಿಥಿಲಗೊಂಡಿದ್ದು ವಾಹನಗಳ ಸಂಚಾರಕ್ಕೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅದೇ ರೀತಿ ಹೆದ್ದುರ್ಗ - ಗುಮ್ಮನಹಳ್ಳಿ ರಸ್ತೆಯಲ್ಲಿ ಮಡಬಲು ಬಳಿಯಿರುವ ಸೇತುವೆಯು ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅವುಗಳ ದುರಸ್ತಿಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹಳೆಯ ಸೇತುವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಸ್ವಲ್ಪ ದುರಸ್ತಿ ಮಾಡಬೇಕಾಗಿದ್ದು ಇದನ್ನು ಶೀಘ್ರವಾಗಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ ವಾಹನ ಸಂಚಾರಕ್ಕೆ ಅಡಚಣೆಯಾಗಿರುವುದಿಲ್ಲ.

ಆ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಇ) 1) ಬೆಳಗೂಡು-ಹಾಸನ ನಡುವೆ ಈಶ್ವರಹಳ್ಳಿ ಬಳಿ ಸೇತುವೆ ಪ್ರಸಕ್ತ ಸಾಲಿನಲ್ಲಿ ದುರಸ್ತಿ ಮಾಡಲು ಕ್ರಮ ಕೈಗೊಂಡಿದೆ.

2) ಹೆದ್ದುರ್ಗ-ಗುಮ್ಮನಹಳ್ಳಿ ರಸ್ತೆಯಲ್ಲಿ ಮಡಬಲು ಬಳಿ ಇರುವ ಸೇತುವೆ ದುರಸ್ತಿ ಕಾರ್ಯವನ್ನು ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ರಸ್ತಾಪಿಸಲಾಗಿದ್ದು, ಅನುಮೋದನೆಗೊಂಡ ನಂತರ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲಾಗುವುದು.

ತುಮಕೂರು ಜಿಲ್ಲೆಯಲ್ಲಿರುವ ನಿರೀಕ್ಷಣಾ ಮಂದಿರಗಳ ಸಂಖ್ಯೆ

173 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿರುವ ನಿರೀಕ್ಷಣಾ ಮಂದಿರಗಳೆಷ್ಟು?

ಆ) ಈ ನಿರೀಕ್ಷಣಾ ಮಂದಿರಗಳ ಅಭಿವೃದ್ಧಿಗೆ ಹಾಗೂ ಪೀಠೋಪಕರಣಗಳ ಖರೀದಿಗೆ ಕಳೆದ ಮೂರು ವರ್ಷಗಳಿಂದ ವೆಚ್ಚಾದ ಹಣವೆಷ್ಟು?

ಇ) ಆ ಪೈಕಿ ಸಿರಾ ನಿರೀಕ್ಷಣಾ ಮಂದಿರಕ್ಕೆ ಖರೀದಿಸಿದ ವಸ್ತುಗಳಾವುವು?

ಈ) ಈ ರೀತಿ ಸಿರಾ ನಿರೀಕ್ಷಣಾ ಮಂದಿರಕ್ಕೆ ಖರೀದಿಸಿದ ವಸ್ತುಗಳು ಸ್ಥಳಕ್ಕೆ ತಲುಪಿದೆಯೇ?

ಉ) ಈ ನಿರೀಕ್ಷಣಾ ಮಂದಿರಕ್ಕೆ ಪೀಠೋಪಕರಣಗಳನ್ನು ಖರೀದಿಸುವಾಗ ಬೇರೆ ಬೇರೆ ಕೆಲಸಗಳಲ್ಲಿ ವೆಚ್ಚು ಹಾಕಲಾಗಿದೆಯೇ?